ವಿಷಯವು ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ.

ಪುತ್ತೂರು ನಗರದಲ್ಲಿ ಒಳಚರಂಡಿ ಯೋಜನೆ

1116 (1537)

ಶ್ರೀ ಸದಾನಂದ ಗೌಡ ಡಿ.ವಿ. (ಪುತ್ತೂರು) ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಎಡಿಬಿ ಯೋಜನೆಯಲ್ಲಿ ಪುತ್ತೂರು ನಗರ ಸಭೆ ಹಮ್ಮಿಕೊಂಡ ಯೋಜನೆಗಳು ಯಾವುವು ಅವು ಈಗ ಯಾವ ಹಂತದಲ್ಲಿವೆ. ಎಂದಿನಿಂದ ಕಾರ್ಯಾರಂಭ ಮಾಡಲಾಗುವುದು?

ಆ) ಎಡಿಬಿ ಯೋಜನೆಯಲ್ಲಿ ಪುತ್ತೂರು ನಗರದ ಒಳಚರಂಡಿ ಯೋಜನೆಯನ್ನು ಕೈಗೆತ್ತಿಕೊಳ್ಳುವ ಉದ್ದೇಶ ಸರ್ಕಾರಕ್ಕಿದೆಯೇ, ಹಾಗಿಲ್ಲದಿದ್ದಲ್ಲಿ ಈ ಬಗ್ಗೆ ಪರ್ಯಾಯ ಯೋಜನೆಗಳನ್ನೇನಾದರೂ ಕೈಗೊಳ್ಳಲಾಗುವುದೇ?

ಶ್ರೀ ಎಂ. ಎಸ್. ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಎಡಿಬಿ ಯೋಜನೆಯ ಅಡಿಯಲ್ಲಿ ಹಲವಾರು ಯೋಜನೆಗಳನ್ನು ತೆಗೆದುಕೊಳ್ಳಲಾಗುವುದು. ಉದಾಹರಣೆಗೆ. ನೀರು ಸರಬರಾಜು, ರಸ್ತೆ, ಸಂಚಾರಿ ವ್ಯವಸ್ಥೆ, ಕೊಳಚೆಅಭಿವೃದ್ಧಿ ಮತ್ತು ಮಾರುಕಟ್ಟೆಗಳು ಇತ್ಯಾದಿ. ಪುತ್ತೂರು ನಗರದ ಜೊತೆಯಲ್ಲಿ ಇನ್ನೂ ಕೆಲವೊಂದು ನಗರಗಳಲ್ಲಿ ಮೇಲಿನಂತಹ ಯೋಜನೆಗಳನ್ನು ತೆಗೆದುಕೊಳ್ಳುವ ಬಗ್ಗೆ ಎಡಿಬಿ ಜೊತೆಯಲ್ಲಿ ಮಾತುಕತೆ ನಡೆಯುತ್ತಿದೆ. ಈ ಮಾತುಕತೆಯು ಇನ್ನೂ ಸಂಪೂರ್ಣವಾಗಿ ಮುಗಿದಿಲ್ಲ. ಈ ಮಾತುಕತೆ ಪೂರ್ಣಗೊಂಡ ನಂತರ ಎಡಿಬಿ ಜೊತೆ ಒಪ್ಪಂದಕ್ಕೆ ಸಹಿ ಆದ ನಂತರ ಈ ಮೇಲಿನ ಯೋಜನೆಗಳನ್ನು ತೆಗೆದುಕೊಳ್ಳಲಾಗುವುದು.

ಆ) -ಇಲ್ಲಾ-

ಪೌರಾಡಳಿತ ಇಲಾಖೆಯಲ್ಲಿ ಸರ್ಕಾರದ ಗಮನಕ್ಕೆ ತರದೆ ಮುಂಬಡ್ತಿ ನೀಡಿರುವುದು

1118(1609)

ಶ್ರೀ ಯು. ಆರ್. ಸಭಾಪತಿ (ಉಡುಪಿ) ಮಾನ್ಯ ಪೌರಾಡಳಿತ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

1. 1996-97, 97-98 ಮತ್ತು 98-99 ಮಾರ್ಚ್‌ವರೆಗೆ ಸರ್ಕಾರದ ಗಮನಕ್ಕೆ ಬಾರದೆ ಪೌರಾಡಳಿತ ಇಲಾಖೆಯಲ್ಲಿ ಮುಂಬಡ್ತಿಗಳನ್ನು ಮಾಡಲಾಗಿರುವುದು ನಿಜವೇ? ಹಾಗಿದ್ದಲ್ಲಿ ಅವುಗಳ ಸಂಖ್ಯೆ ಎಷ್ಟು ಹಾಗೂ ಅದಕ್ಕೆ ಕಾರಣಗಳೇನು?
2. ಈ ರೀತಿ ಮುಂಬಡ್ತಿ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?
3. ಇನ್ನು ಮುಂದೆ ಮುಂಬಡ್ತಿ ಮಾಡುವಾಗ ಸರ್ಕಾರದ ಗಮನಕ್ಕೆ ತಾರದೆ ಮಾಡಬಾರದೆಂದು ಸುತ್ತೋಲೆ ಹೋರಡಿಸಿರುವುದು ನಿಜವೇ?
4. ಮುಂಬಡ್ತಿಗಾಗಿ ಕಾದಿರುವವರ ಸಂಖ್ಯೆ ಎಷ್ಟು?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು.)

ಹೌದು

1996-97 ಸಾಲಿನಲ್ಲಿ ಒಟ್ಟು 438 ವಿವಿಧ ದರ್ಜೆಯ ಹುದ್ದೆಗಳಿಗೆ ಮುಂಬಡ್ತಿ ನೀಡಲಾಗಿದೆ.

1997-98

1998-99ನೇ ಸಾಲಿನಲ್ಲಿ ಮುಂಬಡ್ತಿ ನೀಡಿರುವುದಿಲ್ಲ.

ಪುರಸಭೆ:ನಗರಸಭೆಗಳ ಗ್ರೂಪ್-ಸಿ ನೌಕರರ ಮುಂಬಡ್ತಿ ವಿಚಾರದಲ್ಲಿ ಪೌರಾಡಳಿತ ನಿರ್ದೇಶಕರಿಗೆ ಇರುವ ಅಧಿಕಾರದನ್ವಯ ಮುಂಬಡ್ತಿ ನೀಡಲಾಗಿದೆ.

1 ಬಂದಿದೆ

2 ಹೌದು

3 ಮುಂಬಡ್ತಿಗಾಗಿ ಕಾದಿರುವವರ ಸಂಖ್ಯೆ ವಿವಿಧ ವೃಂದಗಳಿಂದ 117

ಉಡುಪಿ ಜಿಲ್ಲೆಯಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಇಲಾಖೆಯ ಜಿಲ್ಲಾ ಕಛೇರಿ ತೆರೆಯುವ ಬಗ್ಗೆ

1119 (1611)

ಶ್ರೀ ಯು. ಆರ್. ಸಭಾಪತಿ (ಉಡುಪಿ) ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಉಡುಪಿ ಜಿಲ್ಲೆಯಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಇಲಾಖೆಯ ಜಿಲ್ಲಾ ಕಛೇರಿ ತೆರೆಯುವ ಪ್ರಸ್ತಾವನೆ ಏನಾದರೂ ಸರ್ಕಾರದವರ ಮುಂದೆ ಇದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಕೈಕೊಂಡ ಕ್ರಮಗಳೇನು?

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಸಣ್ಣ ಕೈಗಾರಿಕಾ ಸಚಿವರು):

ಅ) ಇದೆ

ಆ) ಸರ್ಕಾರವು ಆದೇಶ ಸಂಖ್ಯೆ :ಸಿಪಿ 73 ಎಸ್ಎಲ್ವಿ 98 ಬೆಂಗಳೂರು, ದಿನಾಂಕ : 10-3-99ರಂತೆ ರಾಜ್ಯದಲ್ಲಿ ಹೊಸದಾಗಿ ರಚಿತವಾದ 7ಜಿಲ್ಲೆಗಳಲ್ಲಿ ಜಿಲ್ಲಾ ಕಛೇರಿಗಳನ್ನು ಸ್ಥಾಪಿಸಲು ಮಂಜೂರಾತಿ ನೀಡಲಾಗಿದ್ದು ಮಂಡಳಿಯು ದಿ : 1-6-99ರಿಂದ ಜಾರಿಗೆ ಬರುವಂತೆ ಉಡುಪಿಯಲ್ಲಿ ಜಿಲ್ಲಾ ಕಛೇರಿಯನ್ನು ಸ್ಥಾಪಿಸಲಾಗಿದೆ.

ರಾಜ್ಯದಲ್ಲಿ ಪರವಾನಗಿ ಇಲ್ಲದೆ ನಡೆಯುತ್ತಿರುವ ಗಣಿ ಕೈಗಾರಿಕೆಗಳು

1120 (1612)

ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಗಣಿ ಮತ್ತು ಭೂವಿಜ್ಞಾನ, ಪರಿಸರ ಹಾಗೂ ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ. ರಾಜ್ಯದಲ್ಲಿ ಗಣಿ ಕೈಗಾರಿಕೆಯಲ್ಲಿರುವ ಗುತ್ತಿಗೆದಾರರ ಒಟ್ಟು ಸಂಖ್ಯೆ ಎಷ್ಟು;

ಆ. ಪರವಾನಗಿ ಇಲ್ಲದೆ ಅಕ್ರಮವಾಗಿ ಗಣಿ ಕೈಗಾರಿಕೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;